# <u>ನಗರಸಭಾ ಕಾರ್ಯಾಲಯ, ತುಮಕೂರು.</u>

ನಂ.ನಸತು:ಕಂಶಾ(4)ಹರಾಜ್: 12/2006–07 ದಿನಾಂಕ 28–05–2007.

## –:<u>ಮರು ಬಹಿರಂಗ ಹರಾಜು ಇಸ್ತಿಯಾರ್</u>:–

***ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಪಡಿಸುವುದೇನೆಂದರೆ***

ತುಮಕೂರು ನಗರಸಭೆಗೆ ಸೇರಿದ ಈ ಕೆಳಕಂಡ ವಿವಿಧ ಬಾಬುಗಳನ್ನು ದಿನಾಂಕ:15–06–2007 ಅಥವಾ ದಿನಾಂಕ: 01–07–2007 ರಿಂದ 31–03–2008 ರವರಿಗೆ ರೂಢಿಸಿಕೊಳ್ಳುವ ಹಕ್ಕನ್ನು ದಿನಾಂಕ: 13–06–2007ನೇ ಬುಧವಾರ ಬೆಳಿಗ್ಗೆ 11.00 ಗಂಟೆಗೆ ಸರಿಯಾಗಿ ನಗರಸಭಾ ಸಭಾಂಗಣ (ಶ್ರೀ ಕೃಷ್ಣರಾಜೇಂದ್ರ ಪುರಭವನ) ದಲ್ಲಿ ಪೌರಾಯುಕ್ತರು ಅಥವಾ ಅವರಿಂದ ಅಧಿಕಾರ ಪಡೆದವರಿಂದ ಹರಾಜು ಮಾಡಲಾಗುತ್ತದೆ. ಆಸಕ್ತಿ ಉಳ್ಳವರು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಹರಾಜಿನಲ್ಲಿ ಭಾಗವಹಿಸಿ ಬಾಬುಗಳನ್ನು ಪಡೆಯಬಹುದು.

| ಕ್ರ.ಸಂ. | ಬಾಬುಗಳು | ಠೇವಣಿ ಮೊತ್ತ |
|---|---|---|
| 1 | ಶ್ರೀ ಸಿದ್ಧಿವಿನಾಯಕ ತರಕಾರಿ ಮಾರುಕಟ್ಟೆ ಸುಂಕ ವಸೂಲಿ (ಮಂಕರಿ ಒಂದಕ್ಕೆ 1/– ರೂ., ಮೂಟೆ ಒಂದಕ್ಕೆ 2/– ರೂ.ನಂತೆ) | 50000–00 |
| 2 | ನಗರದ ಕ್ಯಾತ್ಸಂದ್ರದಲ್ಲಿ ಪ್ರತಿ ಮಂಗಳವಾರ ನಡೆಯುವ ಸಂತೆ ಸುಂಕ ವಸೂಲಿ ಹಕ್ಕು.<br>ಕುರಿ, ಮೇಕೆಗಳಿಗೆ 1/– ರೂ., ತರಕಾರಿ ಅಂಗಡಿಗಳಿಗೆ 3/– ರೂ. ಚಿಕ್ಕ ಅಂಗಡಿಗಳಿಗೆ ರೂ. 5/–, ದಿನಸಿ ಅಂಗಡಿಗಳಿಗೆ 7/– ರೂ. | 25000–00 |
| 3 | ಕಸಾಯಿಖಾನೆಯಲ್ಲಿ ಸುಂಕ ವಸೂಲಿ ಮಾಡುವ ಹಕ್ಕು<br>ಕುರಿ, ಮೇಕೆ ತಲಾ ಒಂದಕ್ಕೆ 1/– ರೂ. | 500–00 |

**<u>ಷರತ್ತುಗಳು</u>**

1. ಹರಾಜಿನಲ್ಲಿ ಭಾಗವಹಿಸುವವರು ಪ್ರಾಪ್ತ ವಯಸ್ಕರಾಗಿರಬೇಕು.
2. ನಗರಸಭೆಯಲ್ಲಿ ಯಾವುದೇ ತೆರಿಗೆ ಬಾಕಿಯನ್ನು ಉಳಿಸಿಕೊಂಡವರಿಗೆ ಹರಾಜಿನಲ್ಲಿ ಭಾಗವಹಿಸಲು ಹಕ್ಕು ಇರುವುದಿಲ್ಲ.
3. ಹರಾಜಿನಲ್ಲಿ ಭಾಗವಹಿಸುವವರು ಹರಾಜು ಪ್ರಾರಂಭವಾಗುವ ಮುನ್ನ ಆಯಾ ಬಾಬುಗಳಿಗೆ ನಿಗಧಿಪಡಿಸಿದ ಠೇವಣಿ ಸ್ಥಳದಲ್ಲಿಯೆ ನಗದು ಪಾವತಿಸಿ ಅಥವ ಡಿಡಿ ಮುಖಾಂತರ ಪೌರಾಯುಕ್ತರು, ನಗರಸಭೆ, ತುಮಕೂರು ಇವರ ಹೆಸರಿನಲ್ಲಿ ಪಡೆದ ಠೇವಣಿಯನ್ನು ಸಲ್ಲಿಸ ಖುದ್ದಾಗಿ ಬಿಡ್ ಸವಾಲು ಮೂಲಕ ಹರಾಜಿನಲ್ಲಿ ಭಾಗವಹಿಸಿ ಹಕ್ಕನ್ನು ಪಡೆದುಕೊಳ್ಳಬೇಕು ಮತ್ತು ಹರಾಜನ್ನು ಬಿಡ್ ಮಾಡುವಾಗ ರೂ.100/–ದರದಲ್ಲಿ ಹೆಚ್ಚು ಬಿಡ್ ಮಾಡಬೇಕು.
4. ಯಶಸ್ವಿ ಬಿಡ್‌ದಾರನ ಠೇವಣಿಯನ್ನು ಬಿಟ್ಟು ಉಳಿದ ಬಿಡ್‌ದಾರರಿಗೆ ಠೇವಣಿಯನ್ನು ಹರಾಜು ಮುಗಿದ ಕೂಡಲೇ ವಾಪಸ್ಸು ಕೊಡಲಾಗುವುದು.
5. ಹರಾಜು ಸಮಯದಲ್ಲಿ ಯಾವುದೇ ಕಾರಣವನ್ನು ಕೊಡದೆ ಹರಾಜನ್ನು ತಿರಸ್ಕರಿಸುವ ಹಾಗೂ ಯಾವುದೇ ಸಂದರ್ಭದಲ್ಲಿ ಯಾವುದೇ ರೀತಿಯ ಷರತ್ತುಗಳನ್ನು ಹೂಸದಾಗಿ ವಿಧಿಸುವ ಅಧಿಕಾರವನ್ನು

ಹರಾಜು ಮಾಡುವ ಅಧಿಕಾರಿಗೆ ಇರುವುದು. ಈ ರೀತಿಯಾಗಿ ವಿಧಿಸುವ ಷರತ್ತುಗಳಿಗೆ ಬದ್ಧವಾಗಿರತಕ್ಕದ್ದು.

6. **ಯಶಸ್ವಿ ಬಿಡ್‌ದಾರನು ಹರಾಜು ಮುಗಿದ ನಂತರ ಅಖೈರು ಬಿಡ್‌ನ ಮೊಬಲಗಿನ ಶೇಕಡ 50 ರಷ್ಟು** ಮೊತ್ತವನ್ನು ಸ್ಥಳದಲ್ಲಿಯೆ ಪಾವತಿಸುವುದು, ತಪ್ಪಿದಲ್ಲಿ ಆ ದಿನವೇ ಮರು ಹರಾಜನ್ನು ನಡೆಸಲಾಗುವುದು. ಉಳಿದ ಶೇಕಡ 50 ರಷ್ಟು ಮೊತ್ತವನ್ನು 7 ದಿವಸದೊಳಗಾಗಿ ನಗರಸಭೆಗೆ ಪಾವತಿಸುವುದು. ತಪ್ಪಿದಲ್ಲಿ ಮರು ಹರಾಜು ಮಾಡಲಾಗುವುದು. ಮತ್ತು ಮೊದಲನೆ ಬಿಡ್‌ದಾರರು ಪಾವತಿಸಿರುವ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಮರು ಹರಾಜಿನಿಂದ ನಗರಸಭೆಗೆ ನಷ್ಟ ಉಂಟಾದಲ್ಲಿ ನಷ್ಟವನ್ನು ಮೊದಲನೆ ಹರಾಜುದಾರರಿಂದ ಕಂದಾಯ ರೂಪದಲ್ಲಿ ವಸೂಲಿ ಮಾಡಲಾಗುವುದು. ಒಂದು ವೇಳೆ ನಗರಸಭೆಗೆ ಲಾಭ ಬಂದಲ್ಲಿ ಲಾಭಾಂಶದಲ್ಲಿ ಮೊದಲನೆ ಬಿಡ್‌ದಾರರಿಗೆ ಯಾವುದೇ ಹಕ್ಕು ಇರುವುದಿಲ್ಲ.

7. ಯಶಸ್ವಿ ಬಿಡ್ಡ್ ದಾರರು ದಿನಾಂಕ:1–8–2007 ರಿಂದ ದಿನಾಂಕ:31–3–2008 ರವರೆಗೆ ಹರಾಜು ನಿಭಂದನೆಗಳ ರೀತ್ಯಾ ವಸೂಲು ಮಾಡುವ ಪ್ರತಿ ಟಿಕೆಟ್/ರಸೀತಿಗಳನ್ನು ನಗರಸಭೆಯ ಮೊಹರು ಹಾಕಿಸಿಕೊಂಡು ನಂತರ ವಸೂಲು ಮಾಡುವುದು.

8. ಮೇಲ್ಕಂಡ ಯಾವುದೇ ಷರತ್ತನ್ನು ಉಲ್ಲಂಘನೆ ಮಾಡಿದಲ್ಲಿ ಯಾವುದೇ ಕಾರಣವನ್ನು ನೀಡದೆ ಅಖೈರು ಬಿಡ್‌ದಾರರು ಪಡೆದಿರುವ ಎಲ್ಲಾ ಬಾಬನ್ನು ರದ್ದುಪಡಿಸಿ ಬಿಡ್‌ದಾರರು ಪಾವತಿ ಮಾಡಿರುವ ಮೊಬಲಗನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

9. ನಗರಸಭೆಯ ಅಧಿಕಾರಿಗಳಿಗೆ ಬಾಬುಗಳ ಶುಲ್ಕ ವಸೂಲಾತಿಯ ಬಗ್ಗೆ ಪರಿಶೀಲಿಸುವ ಹಕ್ಕು ಇರುತ್ತದೆ.

10. ಹೆಚ್ಚಿನ ವಿಷಯಗಳಿಗೆ ಕಛೇರಿಯ ವೇಳೆಯಲ್ಲಿ ಕಂದಾಯಾಧಿಕಾರಿ/ವ್ಯವಸ್ಥಾಪಕರನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದಾಗಿದೆ.

11. ಹರಾಜನ್ನು ಅಂಗೀಕರಿಸುವ/ತಿರಸ್ಕರಿಸುವ/ಮರುಹರಾಜು ಮಾಡುವ ವಿಶಿಷ್ಟ ಹಕ್ಕು ನಗರಸಭೆ ಕಾಯ್ದಿರಿಸಿಕೊಂಡಿದೆ.

**ಆಡಳಿತಾಧಿಕಾರಿಗಳು**
**ನಗರಸಭೆ, ತುಮಕೂರು.**

**ಪೌರಾಯುಕ್ತರು**
**ನಗರಸಭೆ, ತುಮಕೂರು.**